ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ಹೆಚ್.ಆರ್.ಎಂ.ಎಸ್/01/2020-21 ಕಾಲೇಜು ಶಿಕ್ಷಣ ಆಯುಕ್ತರವರ ಕಛೇರಿ,
ಬೆಂಗಳೂರು, ದಿನಾಂಕ: 13/08/2020

## ಸುತ್ತೋಲೆ

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬೋಧಕ ಹಾಗೂ ಬೋಧಕೇತರರ ವೇತನ ಬಾಕಿ ಹಾಗೂ ಇತರೇ ಬಾಕಿಗಳನ್ನು ಹೆಚ್.ಆರ್.ಎಂ.ಎಸ್ ನಲ್ಲಿ ಸೆಳೆಯುವ ಕುರಿತು.

*****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಈ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ತಮಗೆ ಬರಬೇಕಾಗಿರುವ 2019-20 ರ ಹಾಗೂ ಅದಕ್ಕೆ ಹಿಂದಿನ ಹಣಕಾಸು ವರ್ಷದ ವೇತನ ಬಾಕಿ ಹಾಗೂ ಇತರೇ ಬಾಕಿಗಳಾದ ವಾರ್ಷಿಕ ವೇತನ ಬಡ್ತಿ ಬಾಕಿ, ಟಿ.ಬಿ.ಎ, ಟಿ.ಬಿ.ಪಿ, ಪದೋನ್ನತಿ ಬಾಕಿ, ಪಿ.ಹೆಚ್.ಡಿ ಮುಂಗಡ ಬಾಕಿಗಳನ್ನು ಹೆಚ್.ಆರ್.ಎಂ.ಎಸ್ ಮುಖೇನ ಪಡೆಯಲು ಹೆಚ್.ಆರ್.ಎಂ.ಎಸ್ ನಲ್ಲಿ ಅನುದಾನವನ್ನು ಒದಗಿಸುವಂತೆ ಅಥವಾ Arrears Option ಸಕ್ರಿಯಗೊಳಸುವಂತೆ ಕೋರಿ ಹಲವಾರು ಕಾಲೇಜುಗಳಿಂದ ಪತ್ರಗಳು ಹೆಚ್.ಆರ್.ಎಂ.ಎಸ್ ವಿಭಾಗದಲ್ಲಿ ಸ್ವೀಕೃತಗೊಳ್ಳುತ್ತಿವೆ.

ಪ್ರಸ್ತುತ, ಕೇಂದ್ರ ಕಛೇರಿಯ ಆಯವ್ಯಯ ವಿಭಾಗದಿಂದ ಇದುವರೆವಿಗೂ ಬಾಕಿಯಿರುವ ವ್ಯತ್ಯಾಸ ಮೊತ್ತವನ್ನು ಪಡೆಯಲು ಬೇಕಾಗಿರುವ ಅನುದಾನದ ಕುರಿತು ಮಾಹಿತಿಯನ್ನು google form ನಲ್ಲಿ ಅಪ್‌ಲೋಡ್ ಮಾಡುವಂತೆ ಸೂಚಿಸಲಾಗಿದ್ದು, ಅದರನ್ವಯ, ಕಾಲೇಜಿನ ಪ್ರಾಂಶುಪಾಲರುಗಳು ಮಾಹಿತಿಯನ್ನು ಸಲ್ಲಿಸಬೇಕಾಗಿರುತ್ತದೆ. ನಂತರದಲ್ಲಿ ಸರ್ಕಾರದಿಂದ ಅನುಮತಿಯನ್ನು ಪಡೆದು, ಹೆಚ್.ಆರ್.ಎಂ.ಎಸ್ ನಲ್ಲಿ ಬಾಕಿ ಮೊತ್ತವನ್ನು ಪಡೆಯಲು Arrears Option ಅನ್ನು ಹೆಚ್.ಆರ್.ಎಂ.ಎಸ್ ಸಮನ್ವಯದೊಂದಿಗೆ ಸಕ್ರಿಯಗೊಳಿಸಲಾಗುವುದು ಹಾಗೂ ಈ ಕುರಿತು ಕೇಂದ್ರ ಕಛೇರಿಯಿಂದ ಸ್ಪಷ್ಟ ನಿರ್ದೇಶನಗಳನ್ನು ಹೊರಡಿಸಲಾಗುವುದು. ಅಲ್ಲಿಯವರೆವಿಗೂ, ಯಾವುದೇ ವೇತನ ಬಾಕಿ ಹಾಗೂ ಇತರೇ ಬಾಕಿಗಳನ್ನು ಜನರೇಟ್ ಮಾಡುವ ಸಂಬಂಧ ಹೆಚ್.ಆರ್.ಎಂ.ಎಸ್ ವಿಭಾಗಕ್ಕೆ ಪತ್ರ ವ್ಯವಹಾರಗಳನ್ನು ನಡೆಸತಕ್ಕದ್ದಲ್ಲ.

13/8/2020

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ,

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ಪ್ರತಿಯನ್ನು:

1. ಪ್ರಾದೇಶಿಕ ಜಂಟಿನಿರ್ದೇಶಕರು, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಕಲ್ಬುರ್ಗಿ ಮತ್ತು ಶಿವಮೊಗ್ಗ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
2. ಮಾಹಿತಿ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಕಛೇರಿ ಪ್ರತಿ.